ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು
**PAPER CLIPPINGS**

4

ಇಲಾಖೆ / ವಿಷಯ : DEPARTMENT / SUBJECT: ಕಾರ್ಮಿಕ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ ದಿನಾಂಕ : DATE: 29/8/2020

# ಎಲ್ಲೆಡೆ ಬೆಡ್ ಫುಲ್, ನಮ್ಮಲ್ಲೇಕಿಲ್ಲ?

## ಧಾರವಾಡ ಜಿಲ್ಲಾಡಳಿತ ವಿರುದ್ಧ ಸಚಿವ ಹೆಬ್ಬಾರ ಗರಂ

■ **ವಿಕ ಸುದ್ದಿಲೋಕ** ಹುಬ್ಬಳ್ಳಿ 29/8

ಸೋಂಕಿತರ ಚಿಕಿತ್ಸೆಗೆ ಎಲ್ಲೆಡೆ ಆಸ್ಪತ್ರೆಯಲ್ಲಿ ಬೆಡ್‌ಗಳು ಫುಲ್ ಆಗಿವೆ. ಇಎಸ್‌ಐ ಆಸ್ಪತ್ರೆಯಲ್ಲಿ ಕೋವಿಡ್ ರೋಗಿಗಳು ದಾಖಲಾಗಿಲ್ಲ ಎಂದರೆ ಹೇಗೆ ಎಂದು ವೈದ್ಯರನ್ನು ಕಾರ್ಮಿಕ ಸಚಿವ ಶಿವರಾಮ್ ಹೆಬ್ಬಾರ ತರಾಟೆಗೆ ತಗೆದುಕೊಂಡರು.

ಇಎಸ್‌ಐ ಆಸ್ಪತ್ರೆಗೆ ಶುಕ್ರವಾರ ಭೇಟಿ ನೀಡಿ ಪ್ರರಿಶೀಲಿಸಿದ ಸಚಿವರು, ''ಜಿಲ್ಲೆಯಲ್ಲಿ ಇಷ್ಟೊಂದು ಸಂಖ್ಯೆಯಲ್ಲಿ ಸೋಂಕಿತರಿದ್ದರೂ ಚಿಕಿತ್ಸೆಗೆ ದಾಖಲಾಗದೇ ಇರುವುದು ಬೇಸರದ ಸಂಗತಿ. ಕೋಟ್ಯಂತರ ರೂ. ವೆಚ್ಚ ಮಾಡಿ ಸಾರ್ವಜನಿಕರ ಸೇವೆಗೆ ಒದಗಿಸಲಾಗಿದೆ. ಈಗಾಗಲೇ ಖಾಸಗಿ ಆಸ್ಪತ್ರೆಯಲ್ಲಿ ಕೂಡ ಬೆಡ್ ಫುಲ್ ಆಗುತ್ತಾ ಬಂದಿದ್ದರೂ ಇಎಸ್‌ಐ ಆಸ್ಪತ್ರೆಯಲ್ಲಿ ಯಾವೊಂದು ಕೊರೊನಾ ಸೋಂಕಿತ ವ್ಯಕ್ತಿಯು ಚಿಕಿತ್ಸೆಗೆ ದಾಖಲಾಗಿಲ್ಲ ಎಂದರೆ ಹೇಗೆ..? ಇಲ್ಲಿನವರ ನಿರಾಸಕ್ತಿ, ಕಾಟಾಚಾರ, ಅವ್ಯವಸ್ಥೆ ಆಗರವಾಗಿದೆ,'' ಎಂದು ಅಸಮಾಧಾನ ವ್ಯಕ್ತಪಡಿಸಿದರು.



ನಂತರ ಸುದ್ದಿಗಾರರ ಜತೆ ಮಾತನಾಡಿ, ''ಇಎಸ್‌ಐ ಆಸ್ಪತ್ರೆಯಲ್ಲಿ ಕೋವಿಡ್ ರೋಗಿಗಳ ಚಿಕಿತ್ಸೆ ಸಲುವಾಗಿಯೇ 200 ಹಾಸಿಗೆಗಳ ವ್ಯವಸ್ಥೆಗೊಳಿಸಿದ್ದರೂ ಜಿಲ್ಲಾಡಳಿತ ಬಳಸಿಕೊಳ್ಳದೇ ಇರುವುದು ಅಚ್ಚರಿ ತಂದಿದೆ,'' ಎಂದು ಹೇಳಿದರು.

''ಕಿಮ್ಸ್ ಆಸ್ಪತ್ರೆಯಲ್ಲಿ ಬೆಡ್ ಇಲ್ಲ ಎಂದು ಅಲ್ಲಿನ ಆಡಳಿತ ಮಂಡಳಿಯವರು ಫೋನ್ ಮಾಡಿ ಹೇಳುತ್ತಾರೆ. ಆದರೆ ಇಎಸ್‌ಐ ಆಸ್ಪತ್ರೆಯಲ್ಲಿ ಬೆಡ್ ಸಿದ್ಧಪಡಿಸಿ ಎರಡು ತಿಂಗಳಾಗಿದೆ. ಕೋವಿಡ್ ಚಿಕಿತ್ಸೆ ಸಲುವಾಗಿಯೇ ಕೇಂದ್ರೀಕೃತ ಎಸಿಯನ್ನು ಕಡಿತಗೊಳಿಸಲಾಗಿದೆ. ಇಷ್ಟೊಂದು ವ್ಯವಸ್ಥೆಗೊಳಿಸಿದರೂ ಜಿಲ್ಲಾಡಳಿತ ಬಳಕೆ ಮಾಡಿಕೊಳ್ಳುತ್ತಿಲ್ಲ. ಈ ಬಗ್ಗೆ ಡಿಸಿ ಬಳಿ ವಿವರಣೆ ಕೇಳುತ್ತೇನೆ,'' ಎಂದು ಹೇಳಿದರು.